ಆಗಿದ್ದು ಅವುಗಳ ಅರ್ಥದ ಬಗ್ಗೆ ನಾವು ಯೋಚಿಸಬೇಕಾಗುತ್ತದೆ. ಈ ಮೂಲಕ ಕತೆಗಾರರು ನಮ್ಮ ಸಾಮಾನ್ಯ ಕಲ್ಪನೆಗಳನ್ನೇ ಸವಾಲಿಗೊಡ್ಡುವಂತೆ ಕಾಣುತ್ತದೆ."

ಕತೆಯೊಂದನ್ನು ಓದುವುದೆಂದರೆ – ಅದನ್ನು ಒಬ್ಬೊಂಟಿಯಾಗಿ, ಮೌನವಾಗಿ ಓದುವುದೆಂದೇ ಅರ್ಥ. ಮುದ್ರಿತ ಪುಟದಲ್ಲಿ ಒಬ್ಬ ವ್ಯಕ್ತಿಯ ಹಾವಭಾವವಾಗಲೀ ಅವನ ದೈಹಿಕ ಚಲನೆಯಾಗಲೀ ಅವನ ಅಳು ನಗುವಾಗಲೀ ಕಾಣುವುದಿಲ್ಲ. ಆದ್ದರಿಂದ ಕತೆಯಲ್ಲಿ ಶಬ್ದಗಳು ತಾವು ನೀಡುವಷ್ಟನ್ನು ಬಿಟ್ಟು ಓದುಗನಿಗೆ ಬೇರೆ ಏನನ್ನೂ ಕರುಣಿಸುವುದಿಲ್ಲ. ಹಾಗಾಗಿ ಕತೆಯನ್ನು ಓದುವುದು ಕತೆಯನ್ನು ಕೇಳಿದಷ್ಟು ಸುಲಭವಲ್ಲ. ಕೇಳುವುದು ನಿಷ್ಕ್ರಿಯ ಪ್ರಕ್ರಿಯೆ; ಓದುವುದು ಹಾಗಲ್ಲ. ಅದು ನಮ್ಮದೇ ಅನುಭವದ ಬೆಳಕಿನಲ್ಲಿ ನಮ್ಮದೇ ಕಲ್ಪನೆಗಳನ್ನು ತೊಡಗಿಸುವಂತೆ ಒತ್ತಾಯಿಸುವಂಥದು.

ಯಾವುದೇ ಒಳ್ಳೆಯ ಕತೆಯೂ ಸ್ವತಃ ಸಂಪೂರ್ಣವಲ್ಲ. ಅದು ಸಂಪೂರ್ಣವಾಗುವುದು ಓದುಗ ತಾನು ಓದುತ್ತಿರುವಾಗಲೇ ಅದಕ್ಕೆ ತನ್ನ ಅನುಭವವಿಶೇಷವನ್ನೂ ಸೇರಿಸಿದಾಗ. ಆದ್ದರಿಂದ ಓದುಗನ ಪಾತ್ರ ಗಣನೀಯ. ಕವಿ ಚಂದ್ರಶೇಖರ ಪಾಟೀಲರ 'ನಿನ್ನ ನನ್ನ ಪಾಲು' ಎಂಬ ಈ ಕವಿತೆ ಕಾವ್ಯಕ್ಕಿರುವ ಓದುಗಪಾತ್ರವನ್ನು ಕುರಿತದ್ದಾಗಿದ್ದರೂ ಸಣ್ಣಕತೆಗೂ ಅನ್ವಯಿಸುವಂತಿದೆ:

ಬಿಳಿಯ ಹಾಳೆಯ ಮೇಲೆ
ಕರಿಯ ಗೆರೆಗಳ ಸಾಲು

ಈ ಗೆರೆಗಳನ್ನು ನನ್ನ
ಕಣ್ಣಿಂದ ಹೀರಿ
ಅವುಗಳ ಜೀವ ಹಿಂಡಿ
ನಾನು ದನಿ ಹೊರಡಿಸಿದಾಗ

ಉಲಿವ ಬಾಯಿಯೂ ನನ್ನದು
ಆಲಿಸುವ ಕಿವಿಯೂ ನನ್ನದು

ಅಂದಾಗ
ಈ ಗೆರೆಗಳ ಕೊರೆದ ಕವಿಯೇ,
ನೀನೆಲ್ಲಿ ಹೋದೆ
ನಾನೇನು ಆದೆ
ನಾನು ನೀನಾದೆ ನೀನು ನಾನಾದೆ

ಈ ನೀನಾ ನಿನಾದದ ನಾದದಲ್ಲಿ ನಿನ್ನ ಪಾಲೆಷ್ಟು...
ನನ್ನದೆಷ್ಟು?